ಜಯಶ್ರೀ ಕಾಸರವಳ್ಳಿ



ಚಿತ್ರಗಳು : ಸೃಜನ್

ಭೂಮಿ ದುಂಡಗಿದೆಯೆನ್ನುವುದನ್ನು ಮರೆತುಬಿಟ್ಟಿದ್ದೀವಿ. ಹಾಗೇ ನೀವೂ.

ಇಲ್ಲೊಂದು ಕತೆಯಿದೆ. ಎಲ್ಲರೂ ಕೇಳಿರದ ಅದೆಷ್ಟೋ ಚಂದದ ಕತೆಗಳಿವೆಯಷ್ಟೇ. ಅಂತಹದ್ದೇ ಎಲ್ಲರಿಗಾಗಿ ಕಾಯುತ್ತಿರುವ ಒಂದು ಸುಂದರವಾದ ಚಿಕ್ಕ ಕತೆ. ಹೇಗೆ ಶುರು ಮಾಡಿದರೂ, ಶುರು ಮಾಡಿದ್ದಲ್ಲಿಗೇ ಬಂದು ತಲುಪುವುದರಿಂದ, ಬೇಗ ಶುರು ಮಾಡಿಬಿಡೋಣ.

ಇರಿ. ಕತೆಯೆಂದ ಮೇಲೆ ನಾಯಕ, ನಾಯಕಿಯರೆಲ್ಲಾ ಇರಬೇಕಲ್ಲವೇ? ಅಂತಹ ಒಬ್ಬ ನಾಯಕ ಮತ್ತು ನಾಯಕಿ ಇಲ್ಲೂ ಇದ್ದಾರೆ ಅಂದುಕೊಳ್ಳೋಣ. ಹುಡುಗ, ಹುಡುಗಿಯೆಂದ ಮೇಲೆ ಪ್ರೇಮ ಕತೆಯಿರಬಹುದೇ ಎಂದು ಮೂಗು ಹೊರಳುತ್ತಿದೆಯೇ? ಸರಿಬಿಡಿ, ಹಾಗೇ ಅಂದುಕೊಳ್ಳೋಣ. ಆದರೆ, ಯಾವ ರೀತಿಯ ಪ್ರೇಮ ಕತೆಯೆಂದು ಕುತೂಹಲವೇ? ಹೇಗೆಂದುಕೊಂಡರೆ ಹಾಗೆ ಹೊರಳುವ ಕತೆಯಾದ್ದರಿಂದ ಮೂಗಲ್ಲಿ ಸ್ವಲ್ಪ ಆಘ್ರಾಣಿಸಿಕೊಳ್ಳುತ್ತಾ ಇರಿ.

ಪ್ರೇಮಕತೆ ಎಲ್ಲಿ ನಡೆದರೆ ಚೆನ್ನಾಗಿರುತ್ತದೆ? ಉಕ್ಕುವ ಅಲೆಯ ದಂಡೆಯಲ್ಲಿ ಬೆಚ್ಚಗಿನ ಜೋಡಿ ಪ್ರಣಯಿಗಳು, ಸದ್ಯಕ್ಕೆ ಪ್ರಪಂಚದಲ್ಲಿ ತಮ್ಮಿಬ್ಬರನ್ನು ಬಿಟ್ಟರೆ ಅನ್ಯ ಜೀವವಿಲ್ಲವೆನ್ನುವಂತೆ ಒತ್ತರಿಸಿಕೊಂಡು, ಒಂದೇ ಬೆರಳಿನಲ್ಲಿ ನಾಜೂಕಾಗಿ ತಮ್ಮ ಹೆಸರೇನೋ ಅಜರಾಮರವೆನ್ನುವಂತೆ ಒದ್ದೆ ಮರಳಿನಲ್ಲಿ ಗುಟ್ಟಾಗಿ ಕೊರೆಯುತ್ತಾ, ಮರುಕ್ಷಣ ಪ್ರತಿ ಅಲೆಗೂ ಅದು ಅಳಿಸಿ ಹೋಗುವುದನ್ನೇ ತನ್ಮಯರಾಗಿ ನೋಡುತ್ತಾ ಕುಳಿತಿರುವ ಚಿತ್ರವೊಂದು ನಿಮಗೆ ಬರುತ್ತಿದೆಯೇ? ಮತ್ತ್ಯಾಕೆ ತಡ,